3. ಹೊಯ್ಸಳ ಸುದರ್ಶನ ಕೇಂದ್ರ (ವಪ್ಪಗಿರಿ)
4. ಪ್ರಸ್ತುತ ಸಾಲಿನಲ್ಲಿ ಹೈಟೆಕ್ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ.

III

1. ಬೇಲೂರು ಹಳೇಬೀಡುಗಳಿಗೆ ಹೋಗುವ ಪ್ರವಾಸಿಗರ ಅನುಕೂಲಕ್ಕಾಗಿ ಸ್ಯೆಟೇಜ್‌ಗಳನ್ನು ಅಳವಡಿಸಲಾಗಿದೆ.
2. ಬೆಂಗಳೂರು ಮತ್ತು ಮೈಸೂರಿನಿಂದ ಬೇಲೂರು ಹಳೇಬೀಡುಗಳಿಗೆ ವ್ಯವಸ್ಥಿತ ಪ್ರವಾಸಗಳನ್ನು ಏರ್ಪಡಿಸಲಾಗಿದೆ.
3. ಬೇಲೂರು ಹಳೇಬೀಡುಗಳ ಬಗ್ಗೆ ಆಕರ್ಷಕ ಪ್ರವಾಸಿ ಮಡಿಕೆಗಳನ್ನು ಹೊರತರಲಾಗಿದೆ.
4. ಈ ಸ್ಥಳಗಳಿಗೆ ಬೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ತರಬೇತಿ ಪಡೆದ ಮಾರ್ಗದರ್ಶಿ ಸೇವೆಯನ್ನು ಒದಗಿಸಲಾಗಿದೆ.

ಹಾಸನ ಜಿಲ್ಲೆಗೆ ಮುಜರಾಯಿ ಅನುದಾನ ಬಿಡುಗಡೆ

1805 (1364) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಗೆ 2001-2002ನೇ ಸಾಲಿನಲ್ಲಿ ಮುಜರಾಯಿ ಇಲಾಖೆಯಿಂದ ಹಣ ಬಿಡುಗಡೆ ಮಾಡಿದ್ದೀರಾ: ತಾಲ್ಲೂಕುವಾರ ವಿವರ ನೀಡುವುದು)

ಆ) 2002-2003ನೇ ಸಾಲಿನ ಅನುದಾನ ಬಿಡುಗಡೆ ಯಾವಾಗ ಮಾಡುತ್ತೀರಾ ತಿಳಿಸುವುದು.

ಶ್ರೀಮತಿ ಸುಮಾವಸಂತ್ (ಮುಜರಾಯಿ ರಾಜ್ಯ ಸಚಿವರು)

ಅ) 2001-2002ನೇ ಸಾಲಿನಲ್ಲಿ ದೇವಾಲಯದ ದುರಸ್ಥಿ ಮತ್ತು ನಿರ್ಮಾಣ ಯೋಜನೆಯಡಿ ಹಾಸನ ಜಿಲ್ಲೆಗೆ ಅನುದಾನ ಮಂಜೂರು ಮಾಡಿರುವ ತಾಲ್ಲೂಕುವಾರು ವಿವರ ಕೆಳಕಂಡಂತೆ ಇರುತ್ತದೆ.

ತಾಲ್ಲೂಕು	ದುರಸ್ಥಿ	ಸಂಸ್ಥೆ	ನಿರ್ಮಾಣ	ಸಂಸ್ಥೆ
ಅಲೂರು	95000-00	2	10000-00	1
ಅರಕಲಗೂಡು	20000-00	1	95000-00	5
ಸಕಲೇಶಪುರ	80000-00	4	25000-00	1
ಹೊಳೇನರಸೀಪುರ	45000-00	2	-	-
ಬೇಲೂರು	60000-00	3	-	-
ಅರಸೀಕೆರೆ	85000-00	4	-	-
ಹಾಸನ	200000-00	11	-	-
ಚೆನ್ನರಾಯ ಪಟ್ಟಣ	75000-00	2	-	-
ಒಟ್ಟು	690000-00	30	130000-00	7

ಆರಾಧನಾ ಯೋಜನೆಯಡಿ ಹಾಸನ ಜಿಲ್ಲೆಗೆ ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಲು ರೂ. 16,96,968-00ಗಳನ್ನು ಬಿಡುಗಡೆ ಮಾಡಲಾಗಿದೆ.

ಅ) 2002-2003ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿ ಹಾಸನ ಜಿಲ್ಲೆಗೆ ರೂ. 10,71,424-00ಗಳ ಬಿಡುಗಡೆ ಮಾಡಿದ್ದು ಉಳಿದ ಮೊತ್ತವನ್ನು ಮಾರ್ಚ್ 2003ರ ಒಳಗಾಗಿ ಬಿಡುಗಡೆ ಮಾಡಲಾಗುವುದು.

ಮುಜರಾಯಿ ಇಲಾಖೆಯಲ್ಲಿರುವ ಅಧಿಕಾರಿಗಳ ವಿರುದ್ಧ ಇರುವ ದೂರುಗಳು

1806 (2454) ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಜರಾಯಿ ಇಲಾಖೆಯಲ್ಲಿ ಅಧೀಕ್ಷಕರು:ವ್ಯವಸ್ಥಾಪಕರುಗಳು ಹಾಗೂ ಇದಕ್ಕೂ ಮೇಲ್ಪಟ್ಟ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ಸಂಖ್ಯೆ ಎಷ್ಟು; (ಇವರುಗಳ ಹೆಸರು, ಪದನಾಮ ಸೇವಾ ಜೇಷ್ಠತೆ ಹಾಗೂ ಯಾವ ಯಾವ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಪೂರ್ಣ ವಿವರಗಳನ್ನು ಒದಗಿಸುವುದು)

ಆ) ಇವರುಗಳ ಪೈಕಿ ಎಷ್ಟು ಜನರ ವಿರುದ್ಧ ಸಾರ್ವಜನಿಕ ದೂರುಗಳು ಕಣದುರುಪಯೋಗ ಹಾಗೂ ಇಲಾಖಾ ವಿಚಾರಣೆಗಳು ಬಾಕಿ ಇರುತ್ತವೆ ಹಾಗೂ ಎಷ್ಟು ಜನರು ಶಿಸ್ತಿನ ಕ್ರಮಕ್ಕೆ ಒಳಗಾಗಿರುತ್ತಾರೆ (ಇವರ ಹೆಸರು ಪ್ರಕರಣಗಳ ಸಂಪೂರ್ಣ ವಿವರ ಹಾಗೂ ಶಿಕ್ಷೆಯ ವಿವರಗಳನ್ನು ಒದಗಿಸುವುದು)

ಇ) ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಇವರುಗಳನ್ನು ಸನ್ನಡತೆಯಿಂದ ಕಾರ್ಯ ನಿರ್ವಹಿಸುವಂತೆ ಮಾಡುವಲ್ಲಿ ಇಲಾಖೆಯ ಮುಂದಿರುವ ಕಾರ್ಯಕ್ರಮಗಳೇನು:

ಈ) ಸದರಿ ವಿಷಯದ ಬಗ್ಗೆ ಇಲಾಖೆಯಲ್ಲಿ ಇದುವರೆವಿಗೆ ಈ ಸಿಬ್ಬಂದಿ ಮತ್ತು ಅಧಿಕಾರಿಗಳಿಗಾಗಿ ಕಾರ್ಯಾಗಾರಗಳನ್ನು ನಡೆಸಲಾಗಿದೆಯೇ: ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಇಂತಹ ಕಾರ್ಯಗಾರಗಳನ್ನು ನಡೆಸಲಾಗುವುದೇ;

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು)

ಅ) ಮುಜರಾಯಿ ಇಲಾಖೆಯಲ್ಲಿ ಅಧೀಕ್ಷಕರು:ವ್ಯವಸ್ಥಾಪಕರು ಹಾಗೂ ಇದಕ್ಕೂ ಮೇಲ್ಪಟ್ಟ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ಒಟ್ಟು ಸಂಖ್ಯೆ: 61 ವಿವರ ಕೆಳಕಂಡಂತಿದೆ.

ಸಮೂಹ ಎ	15
ಸಮೂಹ ಬಿ	25
ಸಮೂಹ ಸಿ	21
(ಅಧೀಕ್ಷಕರು)	
ಒಟ್ಟು	61

(ವಿವರಗಳನ್ನು ಅನುಬಂಧ-1,2 ಮತ್ತು 3ರಲ್ಲಿ ನೀಡಿ

ಆ) ಇವರುಗಳ ಪೈಕಿ ಸಾರ್ವಜನಿಕ ದೂರುಗಳು ಇರುವುದಿಲ್ಲ. ಆದರೆ 14 ಜನರು ಇಲಾಖೆ ವಿಚಾರಣೆಗೆ ಒಳಗಾಗಿರುತ್ತಾರೆ.

(ವಿವರ ಅನುಬಂಧ-4ರಲ್ಲಿ ನೀಡಿದೆ)

ಇ) ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ ಸಿಬ್ಬಂದಿಯವರುಗಳು ಸನ್ನಡತೆಯಿಂದ ಕರ್ತವ್ಯ ನಿರ್ವಹಿಸದೇ ಇದ್ದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ಅನ್ವಯ ಕ್ರಮ ಕೈಗೊಳ್ಳಲಾಗುವುದು.